ದಿನಾಂಕ: 03.08.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್ ಪಿ ವಕೀಲರಿಂದಃ**

ನಾನು ವ್ಯವಸಾಯ ಮತ್ತು ಸ್ವಯಂ ಸೇವಕನಾಗಿ ಹೋಂ ಗಾರ್ಡ್ ಆಗಿ ಜನಗಳ ಸೇವೆ ಮಾಡುತ್ತೇನೆ. ಸರ್ವೆ ನಂ.39 ರ 9 ಎಕರೆ 2 ಗುಂಟೆ ಜಮೀನು ನಮ್ಮ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಐಟಂ.1 ರ ಆಸ್ತಿ ಮೂಲತಃ ಯಾರ ಹೆಸರಿಗೆ ಇತ್ತು ಎಂಬ ಪ್ರಶ್ನೆಗೆ ಸಾಕ್ಷಿ ಕರಿಯಪ್ಪ ಬಿಳಿಯಪ್ಪ ಮತ್ತು ಚಿತ್ತಪ್ಪನ ಹೆಸರಿಗೆ ಇತ್ತು ಎಂದು ಹೇಳುತ್ತಾರೆ. ಕುಂಟ ಚಿತ್ತಪ್ಪ ನಮ್ಮ ಮೂಾಲ ಪುರುಷ ಎಂದರೆ ನಿಜ. ಸದರಿ ಕುಂಟ ಚಿಕ್ಕಪ್ಪನಿಗೆ ಮೂರು ಜನ ಮಕ್ಕಳು ಎಂದರೆ ನಿಜ. ಅವರಿಗೆ 4 ಜನ ಹೆಣ್ಣು ಮಕ್ಕಳು ಇದ್ದು ಅವರು ಮೃತ ಪಟ್ಟಿರುತ್ತಾರೆ. ಈರಪ್ಪ ಮತ್ತು ಬಿಳಿಯಪ್ಪ ಕುಂಟಚಿತ್ತಪ್ಪನ 2 ಮತ್ತು 3 ನೇ ಮಕ್ಕಳು ಎಂದರೆ ನಿಜ. ಈರಪ್ಪ ಮತ್ತು ಬಿಳಿಯಪ್ಪ ನಮ್ಮ ತಾತಂದಿರು ಎಂದರೆ ನಿಜ. ಈರಪ್ಪ ಮತ್ತು ಬಿಳಿಯಪ್ಪ ವಾದಿಗಳ ಮೂಲ ಪುರುಷರು ಎಂದರೆ ನಿಜ. ಕುಂಟಚಿತ್ತಪ್ಪನ ಮೊದಲನೆ ಮಗ ಕರಿಯಪ್ಪ ಪ್ರತಿವಾದಿಗಳ ಮೂಲ ಪುರುಷ ಎಂದರೆ ನಿಜ. ಈರಪ್ಪ 1989-90 ರ ನಂತರ ಮೃತ ಪಟ್ಟಿದ್ದಾರೆ. ಅವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ಕರಿಯಪ್ಪ ಬಿಳಿಯಪ್ಪ ಬಹಳ ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ ಎಂದರೆ ನಿಜ. ಕರಿಯಪ್ಪ , ಬಿಳಿಯಪ್ಪ ಮತ್ತು ಈರಪ್ಪರವರು ಅವರ ಜೀವಿತ ಕಾಲದಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ನಿಜ. ಆದರೆ ಒಟ್ಟಿಗೆ ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಜನ್ಮ ದಿನಾಂಕ 25.07.1979 ಆಗಿದೆ. ಕರಿಯಪ್ಪ ಬಿಳಿಯಪ್ಪನವರು ನಾನು ಹುಟ್ಟುವ ಮುಂಚೆಯೇ ಮೃತ ಪಟ್ಟಿರುತ್ತಾರೆ. ನಾನು ಹುಟ್ಟುವ ಎಷ್ಟು ವರ್ಷಗಳ ಹಿಂದೆ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಕರಿಯಪ್ಪ , ಬಿಳಿಯಪ್ಪ, ಈರಪ್ಪನವರು ನಾನು ಹುಟ್ಟುವ ಪೂರ್ವದಲ್ಲಿಯೇ ತೀರಿಕೊಂಡಿದ್ದರಿಂದ ನನಗೆ ಅವರ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ನನಗೆ

ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಕರಿಯಪ್ಪ , ಬಿಳಿಯಪ್ಪ, ಈರಪ್ಪನವರು ಆ ಕಾಲದಲ್ಲಿಯೇ ಆಸ್ತಿಯನ್ನು ಮೂರು ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ಯಾವ ಯಾವ ಆಸ್ತಿಯಲ್ಲಿ ಯಾರ್ಯಾರು ಎಷ್ಟೆಷ್ಟು ಸ್ವಾಧೀನದಲ್ಲಿ ಇದ್ದರು ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮಿಷ್ಟಕ್ಕೆ ನಾವು ಸ್ವಲ್ಪ ಸ್ವಲ್ಪ ಆಸ್ತಿಯನ್ನು ವ್ಯವಸಾಯ ಮಾಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಐಟಂ ನಂ.1 ರ ಆಸ್ತಿಯಲ್ಲಿ ಕರಿಯಪ್ಪ , ಬಿಳಿಯಪ್ಪ, ಈರಪ್ಪನವರ ಮಕ್ಕಳು ವ್ಯವಸಾಯ ಮಾಡುತ್ತಿದ್ದರು ಎಂದರೆ ನಿಜ. ನಮ್ಮ ತಂದೆಯವರು ಹೇಗೆ ಸ್ವಾಧೀನದಲ್ಲಿ ಇದ್ದರೋ ಅದೇ ರೀತಿ ನಾವು ಈಗ ಸ್ವಾಧೀನದಲ್ಲಿ ಇದ್ದೇವೆ ಎಂದರೆ ನಿಜ. ನಮ್ಮ ತಂದೆಯವರು ಅವರ ತಂದೆ ಸ್ವಾಧೀನ ಇದ್ದ ರೀತಿಯಲ್ಲಿಯೇ ವ್ಯವಸಾಯ ಮಾಡುತ್ತಿದ್ದರು ಎಂದರೆ ನಿಜ. ಸುಮಾರು 90 ವರ್ಷಗಳಿಂದಲೂ ಅದೇ ರೀತಿಯಾಗಿ ಮೂರು ಭಾಗ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಎದಂರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಂದಾಜಿಗೆ ಮೂರು ಭಾಗ ಹಂಚಿಕೊಂಡು ವ್ಯವಸಾಯ ಮಾಡುತ್ತಿದ್ದರು ಎಂದು ಹೇಳುತ್ತಾರೆ.

ಕರಿಯಪ್ಪನಿಗೆ 4 ಜನ ಗಂಡು ಮಕ್ಕಳು ಒಬ್ಬ ಹೆಣ್ಣುಮಗಳು. ಮೊದಲನೇ ಕರಿಯಪ್ಪನ 4 ನೇ ಮಗ ಮುತ್ತಪ್ಪ ಈ ದಾವೆಯ 25 ನೇ ಪ್ರತಿವಾದಿ ಎಂದರೆ ನಿಜ. ಉಳಿದ ಕರಿಯಪ್ಪನ ಮಕ್ಕಳಾದ ಚಿತ್ತಪ್ಪ, ಈರಪ್ಪ, ಬಿಳಿಯಪ್ಪ ಮತ್ತು ಕರಿಯಮ್ಮ ಮೌತಿಯಾಗಿದ್ದಾರೆ ಎಂದರೆ ನಿಜ. ಚಿತ್ತಪ್ಪನನ್ನು ಕುಂಟಚಿತ್ತಪ್ಪ ಎಂಬ ಇನ್ನೊಂದು ಹೆಸರಿನಿಂದ ಕರೆಯುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗೆಲ್ಲರಿಗೂ ಈ ದಾವಾಸ್ತಿಗಳನ್ನು ಹೊರತು ಪಡಿಸಿ ಬೇರೆ ಜಮೀನು ಇದೆ. ಆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಕೊಂಡಿರುತ್ತೇವೆ.

**(ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು